ಓ.ಎಸ್. ನಂ. 51/2014
ಡಿ.ಡಬ್ಲ್ಯೂ -2

ಓ.ಎಸ್. ನಂ. 51/2014
ಡಿ.ಡಬ್ಲ್ಯೂ -2

**<u>ಸಾಕ್ಷಿಯನ್ನು ದಿನಾಂಕ:13.08.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಶ್ರೀ ಟಿ.ಕೆ.ಎಂ. ವಕೀಲರಿಂದ</u>**

**1.** ನಾನು ಕ್ಯಾಮೇನಹಳ್ಳಿಯ ವಾಸಿ. ಕ್ಯಾಮೇನಹಳ್ಳಿಯಿಂದ ತುಂಬುಗಾನಹಳ್ಳಿಗೆ ಸುಮಾರು 10 ಕಿ.ಮೀ. ದೂರ ಆಗುತ್ತದೆ ಎಂದರೆ ಇರಬಹುದು ಎಂದು ನುಡಿದಿದ್ದಾರೆ. ದಾವಾ ಜಮೀನಿನ ಅಕ್ಕ-ಪಕ್ಕದಲ್ಲಿ ನನಗೆ ಸೇರಿದ ಯಾವುದೇ ಜಮೀನುಗಳು ಇರುವುದಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸಂಬಂಧಿಕರು ಎಂದರೆ ಸರಿಯಲ್ಲ. ಸರ್ವೆ ನಂ.73/3 ರ ಜಮೀನನ್ನು ನೋಡಿರುತ್ತೇನೆ. ಅದು ಮುಕ್ಕಾಲು ಎಕರೆ ಇರುತ್ತದೆ. ಸದರಿ ಜಮೀನನ್ನು ನಾನು ನೋಡಿರುತ್ತೇನೆ ಅದು ರುದ್ರಯ್ಯನವರಿಗೆ ಸೇರಿರುತ್ತದೆ. ರುದ್ರಯ್ಯನವರು ಬಸವರಾಜುರವರಿಗೆ ಯಾವ ರೀತಿಯ ಸಂಬಂಧ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.73/2 ರ ಜಮೀನನ್ನು ನೋಡಿರುತ್ತೇನೆ. ಅದೂ ಸಹ ರುದ್ರಯ್ಯನವರಿಗೆ ಸೇರಿರುತ್ತದೆ. ಸರ್ವೆ ನಂ.73/2 ರ ಜಮೀನು ನಂಜುಂಡಯ್ಯನವರಿಗೆ ಸೇರಿರುತ್ತದೆ ಎಂದರೆ

ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಸರ್ವೆ ನಂ.73/2 ರ ಜಮೀನು ಸರ್ವೆ ನಂ. ಸರ್ವೆ ನಂ.73/3 ರ ಪೂರ್ವಕ್ಕೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನಂಜುಡಯ್ಯನವರ ವಾರಸುದಾರರನ್ನು ನಾನು ನೋಡಿಲ್ಲ.

**2.** ಕೆಂಪಣ್ಣನವರ ಮನೆ ರುದ್ರಯ್ಯನವರ ಜಮೀನಿನ ಪೂರ್ವಕ್ಕೆ ಇರುತ್ತದೆ. ಕೆಂಪಣ್ಣನವರ ಮನೆಯ ಅಳತೆ ನನಗೆ ಗೊತ್ತಿಲ್ಲ. ಕೆಂಪಣ್ಣನವರ ಮನೆಯ ದಕ್ಷಿಣಕ್ಕಾಗಲೀ, ಪಶ್ಚಿಮಕ್ಕಾಗಲೀ ಅವರಿಗೆ ಸೇರಿದ ಯಾವುದೇ ಜಾಗವಿರುವುದಿಲ್ಲ ಎಂದರೆ ಸಾಕ್ಷಿಯು ಕೆಂಪಣ್ಣನವರ ಮನೆಯ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ನುಡಿದಿದ್ದಾರೆ. ಕೆಂಪಣ್ಣನವರಿಗೆ ಸೇರಿದ 5 ಗುಂಟೆ ಜಾಗ ಇದ್ದು ಅದರಲ್ಲಿ ಮನೆ, ಕುರಿರೊಪ್ಪ ಮತ್ತು ಬಣವೆ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ. ಕೆಂಪಣ್ಣನವರ ಮನೆ ಪೂರ್ವ-ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 70 ಅಡಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಪೂರ್ವ ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 70 ಅಡಿಯನ್ನು ಹೊರತು ಪಡಿಸಿ ಕೆಂಪಣ್ಣನವರಿಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಕೆಂಪಣ್ಣನವರ ಮನೆ ಇರುವ ಜಾಗ ಸರ್ವೆ ನಂ. 73/2 ರ ಜಮೀನಿನಲ್ಲಿ ಇದ್ದು ಸದರಿ ಜಮೀನು ನಂಜುಂಡಯ್ಯನವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**